# ದರ್ಶನ್ ಯುದ್ಧ ಪರ್ವ

‘ಕುರುಕ್ಷೇತ್ರ’ ದರ್ಶನ್ ನಟನೆಯ ಐವತ್ತನೇ ಸಿನಿಮಾ. ದುಬಾರಿ ಬಜೆಟ್‌ನ ಈ ಸಿನಿಮಾ ಪ್ರಚಾರದ ಅಬ್ಬರದಿಂದಾಗಿ ಗಾಂಧಿನಗರದಲ್ಲಿ ಹಬ್ಬದ ವಾತಾವರಣ ಮೂಡಿಸಿದೆ.

■ ರಘು





ಮುನಿರತ್ನ



ಬಿ. ನಾಗಣ್ಣ

ಕನ್ನಡ ಚಿತ್ರರಂಗದ ದುಬಾರಿ ಸಿನಿಮಾ ಎಂದು ಬಿಂಬಿಸಲಾಗುತ್ತಿರುವ ‘ಕುರುಕ್ಷೇತ್ರ’ ಸಿನಿಮಾ ಸೆಟ್ಟೇರಿದೆ. ಸುಮಾರು ನೂರು ಕೋಟಿ ರೂಪಾಯಿ ವೆಚ್ಚದಲ್ಲಿ ರೂಪುಗೊಳ್ಳುತ್ತಿರುವ ಈ ಸಿನಿಮಾ ದರ್ಶನ್ ನಟನೆಯ 50ನೇ ಸಿನಿಮಾ ಎನ್ನುವುದು ವಿಶೇಷ.

ದರ್ಶನ್ ಅವರಿಗಿದು ಪೌರಾಣಿಕ ಚಿತ್ರದ ಮೊದಲ ಅನುಭವ. ಈ ಮೊದಲು ‘ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ’ ಐತಿಹಾಸಿಕ ಸಿನಿಮಾದಲ್ಲಿ ನಟಿಸಿದ್ದ ಅವರು, ಅದರ ಮುಂದಿನ ಭಾಗದಂತೆ ಪೌರಾಣಿಕ ಪೋಷಾಕಿಗೆ ತಮ್ಮನ್ನೊಡ್ಡಿಕೊಳ್ಳುತ್ತಿದ್ದಾರೆ. ‘ಕುರುಕ್ಷೇತ್ರ’ದಲ್ಲಿ ಅವರದು ದುರ್ಯೋಧನನ ಪಾತ್ರ. ಈ ಪಾತ್ರಕ್ಕಾಗಿ ತಮ್ಮ ರಂಗಭೂಮಿ ದಿನಗಳನ್ನು ಮೆಲುಕು ಹಾಕುತ್ತಿರುವ ಅವರು, ದುರ್ಯೋಧನನ ಪಾತ್ರದ ಸಂಕೀರ್ಣತೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ.

ದರ್ಶನ್ ಪ್ರಮುಖ ಪಾತ್ರದಲ್ಲಿ ಇರುವುದರಿಂದ, ಈ ಸಿನಿಮಾ ದುರ್ಯೋಧನನ ಮೂಲಕ ಮಹಾಭಾರತದ ಕಥನವನ್ನು ನಿರೂಪಿಸುವ ಪ್ರಯತ್ನವಾಗಿದೆ. ಬಿ. ನಾಗಣ್ಣ ನಿರ್ದೇಶಿಸುತ್ತಿರುವ ‘ಕುರುಕ್ಷೇತ್ರ’ – ಯುದ್ಧಕಾಂಡವನ್ನು ತೆರೆಯ ಮೇಲೆ ಅದ್ದೂರಿಯಾಗಿ ಬಿಂಬಿಸಲಿದೆ. ತೆಲುಗಿನ ‘ಬಾಹುಬಲಿ’ ಚಿತ್ರಕ್ಕೆ ಗ್ರಾಫಿಕ್ಸ್ ಮಾಡಿರುವ ತಂಡವೇ ಈ ಚಿತ್ರಕ್ಕೂ ಕೆಲಸ ಮಾಡುತ್ತಿರುವುದು ವಿಶೇಷ. ಹರಿಕೃಷ್ಣ ಸಂಗೀತ, ಕಿಂಗ್ ಸಾಲೋಮನ್ ಸಾಹಸ ಸಂಯೋಜನೆ ಚಿತ್ರಕ್ಕಿದೆ.

ಮುನಿರತ್ನ ನಿರ್ಮಿಸುತ್ತಿರುವ ಸಿನಿಮಾದ ತಾರಾಗಣವೂ ಆಕರ್ಷಕವಾಗಿದೆ. ಅಂಬರೀಷ್, ರವಿಚಂದ್ರನ್, ಶ್ರೀನಿವಾಸಮೂರ್ತಿ, ಶ್ರೀನಾಥ್, ಅರ್ಜುನ್ ಸರ್ಜಾ, ಶಶಿಕುಮಾರ್, ಸಾಯಿಕುಮಾರ್, ರವಿಶಂಕರ್, ನಿಖಿಲ್ ಕುಮಾರ್ ಸೇರಿದಂತೆ ಹಲವು ಜನಪ್ರಿಯರು ಮಹಾಭಾರತ ಸಂಗ್ರಾಮವನ್ನು ಕಳೆಗಟ್ಟಿಸಲಿದ್ದಾರೆ. ಲಕ್ಷ್ಮಿ, ಸ್ನೇಹಾ, ಹರಿಪ್ರಿಯಾ ಮತ್ತು ರೆಜಿನಾ ಪ್ರಮುಖ ಸ್ತ್ರೀಪಾತ್ರಗಳನ್ನು ಪೋಷಿಸುತ್ತಿದ್ದಾರೆ.

ಪೌರಾಣಿಕ ಸಿನಿಮಾಗಳಲ್ಲಿ ಪಳಗಿರುವ ಜಿ.ಕೆ. ಭಾರವಿ ಹಾಗೂ ಜಯಶ್ರೀ ದೇವಿ ಅವರು ‘ಕುರುಕ್ಷೇತ್ರ’ ಬಳಗದಲ್ಲಿದ್ದಾರೆ. ಭಾರವಿ ಅವರು ಚಿತ್ರಕಥೆ ರೂಪಿಸಿದ್ದರೆ, ಯೋಜನಾ ನಿರ್ದೇಶಕರಾಗಿ ಜಯಶ್ರೀ ದೇವಿ ದುಡಿಯುತ್ತಿದ್ದಾರೆ.

ಮುನಿರತ್ನ ‘ಕುರುಕ್ಷೇತ್ರ’ದ ನಿರ್ಮಾಪಕರು. ತುಂಬು ಮಹತ್ವಾಕಾಂಕ್ಷೆಯಿಂದ ಮಹಾಭಾರತ ಕಥನವನ್ನು ದೃಶ್ಯ ಮಾಧ್ಯಮಕ್ಕೆ ತರುತ್ತಿರುವ ಅವರು, ಕೇವಲ ಬಂಡವಾಳ ತೊಡಗಿಸುವ ಕೆಲಸಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಂಡಿಲ್ಲ. ಕನ್ನಡ ಚಿತ್ರರಂಗದ ಪ್ರಮುಖರನ್ನು ತಮ್ಮ ಚಿತ್ರದಲ್ಲಿ ತೊಡಗಿಸಿಕೊಳ್ಳಲು ಅವರು ಪ್ರಯತ್ನಿಸಿದ್ದಾರೆ. ಈ ಮುನ್ನ ‘ಕಠಾರಿ ವೀರ ಸುರ ಸುಂದರಾಂಗಿ’ ಎನ್ನುವ ರಮ್ಯ ಪ್ರೇಮ ಕಥಾನಕವನ್ನು ‘ಥ್ರೀ ಡಿ’ ತಂತ್ರಜ್ಞಾನದಲ್ಲಿ ನಿರ್ಮಿಸಿದ್ದ ಅವರು, ಈಗಲೂ ‘ಥ್ರೀ ಡಿ’ ಕಣ್ಣಾಳಕಕ್ಕೆ ಮೊರೆಹೋಗಿದ್ದಾರೆ.

ಚಿತ್ರದ ಪೋಸ್ಟರ್‌ಗಳಲ್ಲಿ ‘ಕುರುಕ್ಷೇತ್ರ’ದ ಜೊತೆಗೆ ಮುನಿರತ್ನ ಅವರ ಹೆಸರೂ ಪ್ರಮುಖವಾಗಿ ಕಾಣಿಸಿಕೊಂಡಿದೆ. ಕಥೆಯ ಕ್ರೆಡಿಟ್ ಕೂಡ ಅವರ ಹೆಸರಲ್ಲೇ ಇದೆ. ಮಹಾಭಾರತದ ಕಥೆಯನ್ನು ತಮ್ಮ ಹೆಸರಿನೊಂದಿಗೆ ಗುರ್ತಿಸಿಕೊಳ್ಳುವುದಕ್ಕೆ ‘ಗದಾಯುದ್ಧ’ದ ರನ್ನ ಹೇಳಿದಂತೆ ಎಂಟೆದೆಗಳಿರಬೇಕು; ಇಲ್ಲವೇ ವಿಪರೀತ ಹುಂಬತನ ಇರಬೇಕು. ಮುನಿರತ್ನರದು ಎಂಟೆದೆಯ ಸಾಹಸವೋ ಅಥವಾ ಹುಂಬತನದ ಪರಮಾವಧಿಯೋ ಎನ್ನುವುದು ಚಿತ್ರ ತೆರೆಕಂಡ ನಂತರವಷ್ಟೇ ಸ್ಪಷ್ಟವಾಗಲಿದೆ. ■